ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಶುಕ್ರವಾರ, ದಿನಾಂಕ: 25ನೇ ಸೆಪ್ಟಂಬರ್, 2020

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ನೀಡಿರುವ ಕುರಿತು

ಶ್ರೀ ಲಹರ್‌ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು):-

728 (823) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮೀಣ ಭಾಗದ ಜನರಿಗೆ ಉದ್ಯೋಗ ನೀಡುವ ಕ್ರಮ ಜಾರಿಯಲ್ಲಿದೆಯೇ ;

(ಆ) ಕೋವಿಡ್ ಪರಿಸ್ಥಿತಿ ಆರಂಭವಾದ 2020ರ ಮಾರ್ಚ್ ಮಾಹೆಯಿಂದ 2020ರ ಜುಲೈ ಮಾಹೆಯವರೆಗೆ ಈ ಯೋಜನೆಯಡಿ ಉದ್ಯೋಗ ಪಡೆದವರ ವಿವರ ಹಾಗೂ ಒಟ್ಟು ನಡೆದ ಕಾಮಗಾರಿಗಳು ಹಾಗೂ ಅದರ ವೆಚ್ಚದ ಪೂರ್ಣ ವಿವರವನ್ನು ಒದಗಿಸುವುದು ?